Regd

ಸ್ವರಾಜ್ಯ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 144] ಸೋಮವಾರ 26—4—48 [ಬಿಡಿಪ್ರತಿ 3 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಕರಿಂದ)

ಮೇಷ—ಅನಾರೋಗ್ಯ. ಉತ್ತಮ ಕೆಲಸಗಳಿಗೆ ವಿಘ್ನ, ಹಣದ ಮುಗ್ಗಟ್ಟು.

ವೃಷಭ— ದೇಹಸ್ಥಿತಿ ಉತ್ತಮ, ಕಾರ್ಯಗಳಲ್ಲಿ ಜಯ, ಸಜ್ಜನರ ಸಹವಾಸ, ಆರ್ಥಿಕ ಲಾಭ

ಮಿಥುನ — ಆಶಾದಾಯಕವಾದ ವಾರ, ಖರ್ಚು ಹೆಚ್ಚು

ಕರ್ಕಾಟಕ.... ಚಿಂತೆಗಳಿಂದ ಕೂಡಿದ ವಾರ, ಅಶಾಂತಿ ಅಪಮಾನ ಧನದ ಮುಗ್ಗಟ್ಟು

ಸಿಂಹ— ಗಡಿಬಿಡಿಯಿಂದ ಕೂಡಿದ ವಾರ ಶಾಂತತೆ, ವಿಶ್ರಾಂತಿ ಇಲ್ಲ

ಕನ್ಯ.... ಧನಲಾಭವಿದೆ, ಮನಸ್ಸಿಗೆ ಶಾಂತತೆ ಉಂಟು

ತುಲ.... ಸರ್ವತೋಮುಖವಾಗಿ ಜಯಪ್ರದ ವಾರ.

ವೃಶ್ಚಿಕ.... ಖರ್ಚು ಹೆಚ್ಚು; ಕಾರ್ಯ ನಿರ್ವಹಣಾಶಕ್ತಿ ಹೆಚ್ಚಾಗಿರುತ್ತೆ.

ಧನಸ್ಸು .... ಪ್ರಿಯಜನ ವಿಯೋಗ ಸಂಭವ. ಶತ್ರುಪೀಡೆ, ಅಧಿಕ ವ್ಯಯ.

ಮಕರ .... ವಿಶ್ವಾಸಘಾತಕರಿಂದ ದೂರವಿರಿ. ಮನಸ್ಸು ಸ್ಥಿಮಿತವಿರುಲ್ಲ.

ಕುಂಭ—ಧನಲಾಭವುಂಟು. ಪರೋಪಕಾರ್ಯಗಳಿಗೆ ಸುಸಮಯ

ಮೀನ— ಚಿತ್ತಚಾಂಚಲ್ಯ ವಾರ.

Woodlands

EVENING SHOWS

From 23—4—48

Dick Tracy Returns

A Republic Serial in 15 parts

Featuring— Ralph Bird

ಡಿಕ್ ಟ್ರೇಸಿ ರಿಟರ್ನ್ಸ್

ಪ್ರತಿ ದಿನ 3 ಆಟಗಳು

At Opera

20—4—48 ರಿಂದ

ಪನ್ನ

[ಹಿಂದಿ)

ಇತ್ತ— ಗೀತಾಸಜಾಮಿ, ಜೈರಾಜ್

ಮಹಾರಾಜಾ ಹೈಸ್ಕೂಲು ಬಳಿ

— ಪೋಲೀಸ್ ಬಂದೋಬಸ್ತ್ —

ವಿದ್ಯಾರ್ಥಿ—ಪೋಲೀಸು ಘರ್ಷಣೆ ! ಸರ್ಕಾರದ ಮುನ್ನೆಚ್ಚರಿಕೆ !

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಸಾಮೂಹಿಕ ಬಹಿಷ್ಕಾರವೇ ?

ಮೈಸೂರು ಏ 26— ಜಿಲ್ಲಾ ಮ್ಯಾಜಿಸ್ಟ್ರೇಟರು 45 ನೇ ಶಾಸನವನ್ನು ಜಾರಿ ಮಾಡಿ, ಮೆರವಣಿಗೆ ಸಭೆ ಮುಂತಾದುವುಗಳನ್ನು ಪ್ರತಿಬಂಧಿಸಿದ್ದಾರೆ. ಪರೀಕ್ಷೆಗಳ ಸಂಬಂಧದಲ್ಲಿ ಈ ಆಜ್ಞೆ ಜಾರಿಯಾಗಿದೆಯೆಂದು ತಿಳಿಯುಬಂದಿದೆ.

ಮಹಾರಾಜಾ ಕಾಲೇಜು ಬಳಿ— ಎಸ್. ಎಸ್. ಎಲ್. ಸಿ. ಪರೀಕ್ಷೆಯ ಟೈಪುರೈಟಿಂಗ್ ಭಾಗ ಈ ದಿವಸ ಮಹಾರಾಜಾ ಹೈ ಸ್ಕೂಲು ಕಟ್ಟಡದಲ್ಲಿ ಪ್ರಾರಂಭವಾಯಿತು. ಪರೀಕ್ಷೆಯು ಉನ್ನೇಡುವಾರರೆಲ್ಲರೂ ಪರೀಕ್ಷೆಗಳಿಗೆ ತೆರಳಿದರು. ಸರಕಾರ ಮುನ್ನೆಚ್ಚರಿಕೆಯಿಂದ ಶಾಲೆಯ ಒಳಿ ಪೋಲೀಸು ಕಾವಲನ್ನು ಭದ್ರವಾಗಿಟ್ಟಿದೆ.

ಪಿ. ಐ. ಡಿ. ಯೋರ್ವನು ಸೈಕಲ್ಲಿನಲ್ಲಿ ತೆರಳುತ್ತಿದ್ದಾಗ ಅಲ್ಲೆಲ್ಲಿ ಗುಂಪು ಕೂಡಿದ್ದ ವಿದ್ಯಾರ್ಥಿಗಳು ಸಿ ಐ ಡಿ ಎಂದು ಕೂಗಿ ಕಲ್ಲು ಬೀರಿದರೆಂದು ತಿಳಿಯುಬಂದಿದೆ. ಕ್ಷಣನೇ ಪೋಲೀಸರು ಲಾಠಿ ಪ್ರದರ್ಶಿಸಿ ವಿದ್ಯಾರ್ಥಿಗಳನ್ನು ಓಡಿಸಿದರೆಂದು ಗೊತ್ತಾಗಿದೆ.

ಇನ್ನೇ ತಾ || 28 ರಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಸಾಮೂಹಿಕ್ಷ್ಯೊಹಿಷ್ಕಾರ ಹಾಕಬೇಕೆಂದು ವಿದ್ಯಾರ್ಥಿಗಳು ನಿರ್ಧರಿಸಿದ್ದಾರೆಂದು ತಿಳಿಯುಬಂದಿದೆ. ಸಂಸ್ಥಾನಾದ್ಯಂತ ಈ ಘಟನೆ ಸಂಭವಿಸಬಹುದೆಂದು ವಿದ್ಯಾರ್ಥಿ ವೃತ್ತದ ವರದಿ.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್
ಕಮಿಷನರವರ ಆಫೀಸಿನಿಂದ

ನೋಟೀಸ್

ಮೈಸೂರು ಸಿಟಿ ಮುನಿಸಿಪಾಲಿಟಿಗಳ ಆಕ್ಟಿನ 71 ನೇ ಸೆಕ್ಷನ್ ಪ್ರಕಾರ ಸಿಟಿ ಮಜಕೂರ್ ಕಿಲ್ಲೆ ಮತ್ತು ಕೃಷ್ಣರಾಜ ಮೊಹಲ್ಲಾ ವಾಸಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸಿಟಿ ಮಜ್ಕೂರಿನಲ್ಲಿ ಸನ್ 1948—49 ನೇ ಸಾಲಿಗೆ ನಡೆದಿರತಕ್ಕ ಮೇಲ್ಕಂಡ ಮೊಹಲ್ಲಾಗಳ ಬಾಬ್ತು ಜನರಲ್ ರಿವಿಜ್ ಅಸೆಸ್‌ಮೆಂಟು ರಜಿಸ್ಟರುಗಳನ್ನು ತಯಾರ್ಮಾಡಿಸಿ ಮುನಿಸಿಪಲ್ ಆಫೀಸಿನಲ್ಲಿ ಇಡಿಸಿರುತ್ತೆ. ಇಷ್ಟವುಳ್ಳವರು ಅಂದರೆ ಮನೆ ಮಾಲೀಕರಾಗಲೀ ಅಥವಾ ವಾಸಸ್ಥರಾಗಲೀ ಅವರ ಕಡೆ ಏಜೆಂಟರುಗಳಾಗಲೀ ಆಫೀಸು ಇರತಕ್ಕ ದಿವಸಗಳಲ್ಲಿ ಮಧ್ಯಾಹ್ನ 3 ಗಂಟೆ ಲಾಗಾಯ್ತು 5 ಗಂಟೆ ವರೆವಿಗೆ ಬಂದು ನೋಡಿಕೊಂಡು ಹೋಗಬಹುದು; ಅಲ್ಲದೆ ರಿಜಿಸ್ಟರಿನಿಂದ ತಮಗೆ ಬೇಕಾದ ಎಕ್ಸ್‌ಟ್ರಾಕ್ಟನ್ನು ಫೀಜು ಇಲ್ಲದೆ ತಾವೇ ಒರೆದುಕೊಳ್ಳಬಹುದು. ಹಾಲಿ ದಾಖಲ್ಮಾಡಿರತಕ್ಕ ಕಂದಾಯದ ವಿಚಾರದಲ್ಲಿ ತಕರಾರುಳ್ಳವರು ಈ ನೋಟೀಸು ತಾರೀಖು ಲಾಗಾಯ್ತು ಒಂದು ತಿಂಗಳವರೆಗಾಗಿ ತಮ್ಮ ತಕರಾರನ್ನು ಅರ್ಜಿ ಮೂಲಕ ಈ ಆಫೀಸಿಗೆ ಗುಜರಾಯಿಸಿಕೊಳ್ಳಬಹುದು. ಮಾಯಿದೆ ಮೀರಿದ ಅರ್ಜಿಗಳಿಗೆ ನಿಗಾ ಕೊಡಲಾಗುವುದಿಲ್ಲವೆಂದು ತಿಳಿಯುವುದು.

ತಾ || 19—4—48 (ಸಹಿ) ಎಸ್. ಎಸ್. ಓರಣ್ಣಯ್ಯ
ಕಮಿಷನರ್, ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಇಂದಿನ ವರ್ತಮಾನ

ವಿಜಯವಾಡ— ಸೆಕ್ಷನ್ 144 ನ್ನು ಉಲ್ಲಂಘಿಸಿ ಸ್ತ್ರೀಯರು ಮೆರವಣಿಗೆ ನಡೆಸಿದರು; ಪೋಲೀಸರು ಟೇರ್ ಗ್ಯಾಸನ್ನು ಉಪಯೋಗಿಸಿದರು : 83 ಮಂದಿ ಸ್ತ್ರೀಯರು ದಸ್ತಗಿರಿಯಾದರು

ಲಂಡನ್— ಇಂಗ್ಲೆಂಡಿನಲ್ಲಿ ಮರಣದಂಡನೆ ತಪ್ಪಿಸಿದ್ದು ಬಂದೀಖಾನೆ ಕೆಲಸಗಾರರಲ್ಲಿ ಅತೃಪ್ತಿಯನ್ನುಂಟು ಮಾಡಿದೆ

ಲಾಹೋರು — ಇಂಡಿಯಾದಿಂದ 3 ಸಾವಿರ ಟನ್ ಸಕ್ಕರೆಯು ಪಾಕಿಸ್ತಾನಕ್ಕೆ ಕಳುಹಿಸಲಾಗಿದೆ

ಬೊಂಬಾಯಿ.... ಯಲ್ಲಿ ಪ್ರೇಕ್ಷಕರ ಗ... ಬಿದ್ದು 15 ಮಂದಿ ಗಾ...

ಹಿಂದೂಸ್ತಾನಕ್ಕೆ 55 ಸಾವಿರ ಬಿ ಎಸ್ ಜೈಸಿಕಲ್ ಕೇಳಲಾಗಿದ್ದು ಅವರು ಕಳಿಸಲು ಒಪ್ಪಿರುವರೆಂದೂ ತಿಳಿಯುಬಂದಿದೆ

ನ್ಯೂಯಾರ್ಕ್.... ಸಿನಿದೂತಾರೆ ಬೀಡಿಲಾಮರಿದ ಮೂಗಿ ವಿಷಯ ಕ್ಷುಲ್ಲ ಒಂದು ಪತ್ರಿಕೆ ಬರೆದದ್ದಕ್ಕಾಗಿ ತನ್ನ ವ...ಗಿಗೆ ಅಪಮಾನವಾಯಿತೆಂದು 50 ಸಾವಿರ ಪೌಂಡು ಪರಿಹಾರಕ್ಕಾಗಿ ಮೊಖದ್ದಮೆ ಹೂಡಿದ್ದಾಳೆ

ಮೈಸೂರು ಏ 25— ಪರೀಕ್ಷೆಗಳು ಮೊದಲು ನಿರ್ಧರಿಸಿರುವಂತೆಯೇ ನಡೆಯುತ್ತವೆಂದೂ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದೂ ಮುಖ್ಯ ಮಂತ್ರಿಗಳೂ ಮತ್ತು ವಿದ್ಯಾ ಸಚಿವರೂ ಅವರನ್ನು ಭೇಟಿ ಮಾಡಿದ ವಿದ್ಯಾರ್ಥಿಗಳಿಗೆ ಬುದ್ಧಿವಾದ ಹೇಳಿದ್ದಾಗಿ ತಿಳಿಯುಬಂದಿದೆ

ಕೋಲಾರ ಏ 25 — ಚಿಕ್ಕಬಳ್ಳಾಪುರ ತಾಲ್ಲೂಕು ಅಗಸರಹಳ್ಳಿ ಗ್ರಾಮದ ಒಬ್ಬ ಮೈಸೂರ್ ಹುಡುಗಿಯನ್ನು ಅಪಹರಿಸಿಕೊಂಡು ಅತಿಕ್ರಮ ಸಂಭೋಗ ಮಾಡಿದ ಅಪಾದನೆಗಾಗಿ ಪೆಳ್ಳೇರಿ ಬುಡನಿಗೆ ಸೆಷನ್ಸ್ ಜಡ್ಜರು 11 ವರ್ಷ ಕಠಿಣ ಸಜಾ ವಿಧಿಸಿದ್ದಾರೆ

6-4-48 ॥ ಶ್ರೀ ॥ ನಂ. 85

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಯೋಗಿರಾಜ ಚಂದ್ರ

— ೪ —



ಯೋಗಿರಾಜ ಚಂದ್ರರು ದೇಶಭ್ರಮಣ ಮಾಡುತ್ತಾ ಒಂದು ನಗರಪಟ್ಟಣ ಎಂಬಲ್ಲಿನ ರಾಜ ಮಾಜಿ ಈತನ ಹುಚ್ಚು ಆಳ್ವಿಕೆಯಲ್ಲಿ ಹಿಂದೂಯ್ತಳು ಬಳಲಿ ಹೋಗಿದ್ದರು. ಚಂದ್ರರ ಉಪದೇಶದಿಂದ ಹಿಂದೂಗಳಲ್ಲಿ ನವಚೇತನದ ಸಂಚಾರವಾಗ ತೊಡಗಿತು. ಇದು ಅಲ್ಲಿನ ಮುಸಲ್ಮಾನರಿಗೆ ಸಂತೋಷವಿಲ್ಲ. ಆದ್ದರಿಂದ ಪರಸ್ಪರ ಸಂಘರ್ಷಣವಾಗ ತೊಡಗಿತು.

ಇದರ ಫಲವಾಗಿ ದರ್ಬಾರು ಆಜ್ಞೆ ಹೊರಡಿಸಿತು— ಎಲ್ಲಾ ಹಿಂದೂಗಳೂ ಮುಸಲ್ಮಾನರಾಗಬೇಕು. ದರ್ಬಾರಿನ ಆಜ್ಞೆಯನ್ನು ಉಲ್ಲಂಘಿಸಿದರೆ ಮರಣದಂಡನೆ ವಿಧ್ದ. ಇದನ್ನು ಕೇಳಿ ಊರಿನವರೆಲ್ಲರೂ ಹಾಹಾಕಾರ ಮಾಡಿದರು. ಎಲ್ಲರೂ ಒಟ್ಟಾಗಿ ಬಂದು ಯೋಗಿರಾಜರನ್ನು ಪಾರ್ಥಿಸಿದರು. ಚಂದ್ರರಂದರು— 'ಹೆದರಬೇಡಿ, ಪ್ರಭುವಿದ್ದಾನೆ'.

ಮಾರನೇ ದಿನ ರಾಜನಾದ ವಿಜರ್ಜಾ ಬಾಕಿಯಿ ಹಿಂದುಗಳನ್ನು ಕರೆಯಿಸಿ ಹೆದರಿಸಿದನು 'ಆ ಹುಚ್ಚ ಚಂದ್ರನನ್ನೇ ಕ್ಕೆ ನಂಬಿ ಪ್ರಾಣಬಡುತ್ತೀರಿ? ಬೇಗ ಮುಸಲ್ಮಾನರಾಗಿರಿ' ಎಂದನು. ಈ ದ್ಧಿಯು ಯೋಗಿರಾಜರಿಗೆ ತಲ್ಪಿತು. ಯೋಗಿರಾಜರಂದರು— 'ಸರಿ, ಯಾರು ಹುಚ್ಚರೆಂಬುದು ಬೇಗನೆ ಗೊತ್ತಾಗುತ್ತದೆ'

ಮಾರನೇ ದಿನವೇ ವಿಜರ್ಜಾ ಬಾಕಿಗೆ ಹಿಡಿಯಿತು. ಹುಚ್ಚು ಹೆಚ್ಚಾಗಿಯಿಂದ ಇರಿದುಕೊಂಡು ಸತ್ತನು. ಟನೆಯು ವಿಕ್ರಮ ಸಂ || ೧೬೪೨ ನಡೆಯಿತು.

ಕಾಶ್ಮೀರದಲ್ಲೂ ಹಿಂದೂ ಜನರನ್ನು ಯೋಗಿರಾಜರು ರಕ್ಷಿಸಿದರು. ಕಾಶ್ಮೀರ ಬ್ರಾಹ್ಮಣ ಜನತೆಯ ಮೇಲೆ ಅತ್ಯಾಚಾರದ ಮೇಲೆ ಅತ್ಯಾಚಾರ ನಡೆಯುತ್ತಿತ್ತು. ಆ ಕಾಲದಲ್ಲಿ ಯಾಕೂಬನು ರಾಜನಾಗಿದ್ದನು.

ಯೋಗಿರಾಜರು ಕಾಶ್ಮೀರಕ್ಕೆ ಬಂದ ಸುದ್ದಿ ತಿಳಿದೊಡನೆಯೇ ಬ್ರಾಹ್ಮಣರು ಭೇಟಿಗೆ ಬಂತೊಡಗಿದರು. ಅಲ್ಲಿನ ಬ್ರಾಹ್ಮಣರ ಅನನ್ಯ ಶ್ರದ್ಧೆ ವಿಶ್ವಾಸವನ್ನು ಕಂಡು ಪ್ರಸನ್ನರಾಗಿ ಚಂದ್ರರು ಉಪನ್ಯಾಸ ಮಾಡಲಾರಂಭಿಸಿದರು. ವಿರೋಧಿಗಳು ತಡೆವುಂಟುಮಾಡಲಾರಂಭಿಸಿದರು. ರಾಜನ ಬೆಂಬಲದಿಂದ ಮುಸಲ್ಮಾನರ ಉಪಟಳವು ಹೆಚ್ಚಾಗಿ ಬ್ರಾಹ್ಮಣರೆಲ್ಲರೂ ಒಂದಾಗಿ ಚಂದ್ರರ ಬಳಿ ಬಂದು ಬೇಡಿಕೊಂಡರು. ಯೋಗಿರಾಜರಂದರು— 'ಹೆದರಬೇಡಿರಿ, ಪ್ರಭುವು ನಿಮ್ಮನ್ನು ಪರೀಕ್ಷಿಸುತ್ತಿದ್ದಾನೆ; ನೆನಪಿಟ್ಟುಕೊಳ್ಳಿರಿ; ಶುದ್ಧ ಹಿಂದೂ ರಾಜ್ಯವೇ ಇಲ್ಲಿ ಸ್ಥಾಪಿತವಾಗುವುದು. ಧರ್ಮರಕ್ಷಣೆಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಬೇಕಾಗಿ ಬಂದರೆ ಅದು ಭಾಗ್ಯವೆಂದು ತಿಳಿಯಿರಿ. ಹೋಗಿ ಸೇವು ರಾಜನಿಗೆ ಹೇಳಿರಿ— 'ನಮ್ಮ ಗುರುವು ಬಂದಿದ್ದಾರೆ, ಅವರು ಇಸ್ಲಾಮಿಗೆ ಸೇರಿದರೆ ನಾವೂ ಸೇರುತ್ತೇವೆ' ಎಂದು.

ಬ್ರಾಹ್ಮಣರು ಅದರಂತೆ ದರ್ಬಾರಿಗೆ ಹೋಗಿ ಹೇಳಿದರು. ಮಾರನೇ ದಿನ ದರ್ಬಾರಿಗೆ ಯೋಗಿರಾಜರನ್ನು ಕರೆತರಲು ಯಾಕೂಬನು ತನ್ನ ಮಂತ್ರಿಯನ್ನು ಕಳಿಸಿದನು. ಚಂದ್ರರ ದರ್ಶನವಾಗುತ್ತಲೇ ಮಂತ್ರಿಯ ಮನವು ಬದಲಾಯಿಸಿತು. ಮಂತ್ರಿಯು ನೋಡುತ್ತಿರುವಾಗಲೇ ಚಂದ್ರರು ಪ್ರಜ್ವಲಿತ ಅಗ್ನಿಕುಂಡದಿಂದ ಉರಿಯುತ್ತಿರುವ ಒಂದು [illegible]ತ್ತಿ ನೆಲದಲ್ಲಿ ಹೂಳಿದರು. ಅದು ಕೂಡಲೇ ಚಿಗುರಿ, ಬೆಳೆದು, ಮರವಾಯಿತು. (ಇಂದೂ ಇದು ಶ್ರೀನಗರದಲ್ಲಿ ಶ್ರೀ ಚಂದ್ರಜುನಾರ್ ಎಂಬ ಹೆಸರಿನಿಂದ ಪ್ರಸಿದ್ಧವೃಕ್ಷವಾಗಿದೆ. ಈಗಲೂ ಈ ಮರವಿದೆ. ಜನರು ಪೂಜಿಸುತ್ತಾರೆ. ಬೇಕಾದವರು ನೋಡಬಹುದು.) ಈ ಸೋಜಿಗವನ್ನು ಕಂಡು ಚಿಕಿತನಾದ ಮಂತ್ರಿಯು ಹೋಗಿ ಯಾಕೂಬನಿಗೆ ಹೇಳಿದನು. ಯಾಕೂಬನೂ ಸೋಜೆಪಟ್ಟು, ಚಂದ್ರರ ಬಳಿಗೆ ಬಂದು, ಕ್ಷಮೆಬೇಡಿದನು.

ಚಂದ್ರರಂದರು— 'ಪಶ್ಚಾತ್ತಾಪದಿಂದೇನು? ಪ್ರಭುವಿನ ದರ್ಬಾರಿನಲ್ಲಿ ನೀನು ಅಯೋಗ್ಯನೆಂದು ನಿರ್ಣಯಿಸಲ್ಪಟ್ಟಿರುವಿ. ಇನ್ನು ಹೆಚ್ಚು ದಿನ ಈ ರಾಜ್ಯದ ಆಡಳಿತವು ನಿನ್ನ ಕೈಯಲ್ಲಿ ಇರಲಾರದು.'

ದೈವವಶಾತ್ ಅದೇ ವರ್ಷ ಅಕ್ಬರನ ಸೇನೆಯು ಬಂದು ಕಾಶ್ಮೀರವನ್ನು ಜಯಿಸಿತು.

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar, Mysore

ಶ್ರೀ ದ್ವಾರಕಾ ಜಗದ್ಗುರುಗಳು

(ಸ್ವಂ. ಸು. ತಂತಿ)

ನಾಸಿಕ್ ಏ 22— ಶ್ರೀ ದ್ವಾರಕಾ ಶಾರದಾ ಪೀಠದ,ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾರಾಜರವರು ಪಾವ್ಗಡ ಬೆಟ್ಟಗಳು, ಪಲಾಲ್, ಸಾವ್ಲಿ ಪಾದ್ರ, ನವಸಾರಿಗಳಿಗೆ ಭೇಟಿ ಕೊಟ್ಟು ತಾ || 20 ರಲ್ಲಿ ನಾಸಿಕ್ಕಿಗೆ ಆಗಮಿಸಿ ಭದ್ರವ ಮಂದಿರದಲ್ಲಿ ಬಿಡಾರ ಮಾಡಿರುವರು. ಶ್ರೀ ಜಗದ್ಗುರುಗಳು ಶ್ರೀ ಗೋದಾವರಿಯಲ್ಲಿ ಸ್ನಾನಮಾಡಿ ಮುಖ್ಯ ದೇವಸ್ಥಾನಗಳನ್ನು ಸಂದರ್ಶಿಸಿದರು. ಬಹು ವಂದಿ ಹಾಜರಾಗಿದ್ದ ಸಭೆಯಲ್ಲಿ ಶ್ರೀ ಜಗದ್ಗುರುಗಳು ಹೃದಯಂಗಮವಾದ ಭಾಷಣ ಮಾಡಿದರು: ಅವರ ಉಪನ್ಯಾಸವು ದಿನವಹಿ ನಡೆಯುತ್ತಿದೆ. ಜಗದ್ಗುರುಗಳು ಪವಿತ್ರ ಸ್ನಾನನಡೆಸಿ, ತ್ರಿಯಂಬಕೇಶ್ವರ ಭೀಮೇಶ್ವರಗಳಿಗೆ ಭೇಟಿಯಿತ್ತು, ಪೂನಾ ಕೊಲ್ಲಾಪುರ ಹುಬ್ಬಳ್ಳಿ ಮಾರ್ಗವಾಗಿ ಮೈಸೂರು ಸಂಸ್ಥಾನಕ್ಕೆ ಒಂದು ವಾರದಲ್ಲಿ ಹೊರಡುವರು.

ಪ್ರಬೋಧ

ವಿಶೇಷಾಂಕವು

ತಾ || 10-5-48 ರಲ್ಲಿ

ಪ್ರಕಟಿಸಲ್ಪಡುವುದು

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಶೀಷೆಯಲ್ಲಿ ಒರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore